**ದಿ: 03-09-2024ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು ಶ್ರೀ ಜಿ.ಎಸ್.ಕೆ.ಎಸ್. ವಕೀಲರಿಂದ :**

ನಿ.ಪಿ - 9ರಲ್ಲಿ ಕಂಡ ಖಾತೆ ಚಾಲ್ತಿಯಾಗಿರುತ್ತದೆ. ಅದರ ಪಾಸ್ ಪುಸ್ತಕ ನನ್ನ ಬಳಿ ಇದೆ. ಸದರಿ ಪಾಸ್ ಪುಸ್ತಕದಲ್ಲಿ ದಿನಾಂಕ 18-03-2022ರಿಂದ ಇಲ್ಲಿಯವರೆಗೆ ಎಷ್ಟೇಷ್ಟು ಹಣ ಜಮಾವಾಗಿದೆ ಎಂದು ಕಂಡುಬರುತ್ತದೆ ಎಂದರೆ ಸರಿ. ನಿ.ಪಿ - 9ನ್ನು ಬ್ಯಾಂಕಿನವರಿಗೆ ಒತ್ತಾಡ ಹೇರಿ ನನ್ನ ಪರವಾಗಿ ತಂದಿದ್ದೇನೆ ಎಂದರೆ ಸರಿಯಲ್ಲ. ನಾನು ಉಲ್ಲೇಖಿಸಿದ ಹಾಗೇ ರೂ.3,91,000/- ಸರಾಸರಿ ಬ್ಯಾಲೇಸ್ಸ್ ಇರಲಿಲ್ಲ ಎಂದರೆ ಸರಿಯಲ್ಲ. ನಿ.ಪಿ - 11 ರಿಂದ 17ರ ದಾಖಲೆಗಳನ್ನು ಅಬ್ದುಲ್ ರಸಾಕ್ ಎನ್ನುವವರು ಕರಾರು ಆಗುವ ಮುಂಚೆ ಜೆರಾಕ್ಸ್ ನೀಡಿದ್ದರು, ನಂತರ ನಿ.ಪಿ - 1 ಕರಾರು ಆಗುವ ದಿನವೇ ನನಗೆ ಮೂಲ ದಾಖಲೆಗಳನ್ನು ನೀಡಿರುತ್ತಾರೆ. ನಿ.ಪಿ -1 ರಲ್ಲಿ ನಿ.ಪಿ - 11 ರಿಂದ 17ರ ಮೂಲ ದಾಖಲೆಗಳನ್ನು ನನ್ನ ವಶಕ್ಕೆ ನೀಡಿದ್ದ ಬಗ್ಗೆ ಉಲ್ಲೇಖವಿಲ್ಲ. ನನ್ನ ವಾದಪತ್ರದಲ್ಲಿ ಮೂಲ ದಾಖಲೆಗಳನ್ನು ನೀಡಿದ್ದ ಬಗ್ಗೆ ಹೇಳಿದ್ದೇನೆ. ಆ ರೀತಿ ನನ್ನವಾದಪತ್ರದಲ್ಲಿ ಪ್ರಸ್ತಾಪಿಸಿಲ್ಲ ಎಂದರೆ ಸರಿಯಲ್ಲ. ಸದರಿ ನಿ.ಪಿ - 11 ರಿಂದ 17ರ ಮೂಲ ದಾಖಲೆಗಳನ್ನು ನನ್ನ ವಶಕ್ಕೆ ಆಸ್ತಿ ಮಾರಾಟ ಮಾಡುವ ಸಂಬಂಧ ಬಂದಿಲ್ಲ ಎಂದರೆ ಸರಿಯಲ್ಲ. ನಾನು ವರ್ಗಾವಣೆ ಮಾಡಿದ ಹಣವನ್ನು ನಿ.ಪಿ - 9ರಲ್ಲಿ ಕಾಣಿಸಿದ ಖಾತೆಯಿಂದ ಮಾಡಿರುವುದಿಲ್ಲ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**